**ದಿನಾಂಕಃ 01.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ವಾದಿಯ ಪರ ವಕೀಲರಿಂದಃ**

3. ಶಿವಸಂಗಯ್ಯ ನನ್ನ ತಂದೆ ಮತ್ತು ಪಾರ್ವತವ್ವ ನನ್ನ ತಾಯಿ ಎಂದರೆ ಸರಿ. ನನ್ನ ತಂದೆ-ತಾಯಿಗೆ ನಾವು 5 ಜನ ಮಕ್ಕಳು ಎಂದರೆ ಸರಿ. ಅವರುಗಳು ಚನ್ನಬಸಮ್ಮ, ನಾನು, 1 ಮತ್ತು 2 ನೇ ಪ್ರತಿವಾದಿ ಹಾಗೂ ವಾದಿ ಇರುತ್ತೇವೆ ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಗಳು ನನ್ನ ಹೆಂಡತಿ ಮತ್ತು ಮಗನೆಂದರೆ ಸರಿ. ನನ್ನ ಅಕ್ಕ ಚನ್ನಬಸಮ್ಮನ ಮಗಳೇ 4 ನೇ ಪ್ರತಿವಾದಿ ಎಂದರೆ ಸರಿ. ನನ್ನ ತಂದೆ-ತಾಯಿ ಇಬ್ಬರ ಸ್ವಂತ ಊರು ಕೂಡಾ ಹಂಪಸಾಗರವೇ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಮೂಲ ಊರು ಹುನಗುಂದ ತಾಲ್ಲೂಕಿನ ತಳ್ಳಿಕೆರೆ ಇರುತ್ತದೆ. ನನ್ನ ತಂದೆಯು ನನ್ನ ತಾಯಿಯನ್ನು ಮದುವೆಯಾದ ನಂತರ ಹಂಪಸಾಗರಕ್ಕೆ ಬಂದು ನೆಲೆಸಿದ್ದರೇ? ಎಂದರೆ ಹೌದು. ನನ್ನ ತಾಯಿ ಪಾರ್ವತಮ್ಮನ ತಂದೆ ಹೆಸರು ವಿರುಪಾಕ್ಷಯ್ಯ ಅರಳೆಲಿ ಮಠ ಇರುತ್ತದೆ. ಸದರಿಯವರಿಗೆ ಗಂಡು ಸಂತಾನ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಾಯಿಯ ತವರು ಮನೆಯ ಆಸ್ತಿಗಳು ಎಂದರೆ ಸರಿ. ನನ್ನ ತಂದೆ 1992 ರಲ್ಲಿ ಮೃತಪಟ್ಟರು ಎಂದರೆ ಸರಿ. ನನ್ನ ತಾಯಿ 1999 ರಲ್ಲಿ ಮೃತಪಟ್ಟರು ಎಂದರೆ ಸರಿ. ನನ್ನ ತಾಯಿ ಜೀವಂತವಿರುವಾಗ ದಾವಾ ಆಸ್ತಿಗಳು ಆಕೆಯ ಮರಣಾ ನಂತರ ಇಂತಹ ವ್ಯಕ್ತಿಗೇ ಸೇರಬೇಕು ಎಂದು ಯಾವುದಾದರೂ ದಾಖಲೆ ಮಾಡಿದ್ದರೇ? ಎಂದರೆ ಮಾಡಿರಲಿಲ್ಲ.

4. 1961 ರಲ್ಲಿ ನನಗೆ ಎಷ್ಟು ವಯಸ್ಸಾಗಿತ್ತು? ಎಂದರೆ 1 ವರ್ಷ ವಯಸ್ಸಾಗಿತ್ತು. ನನ್ನ ಅಣ್ಣ 1 ನೇ ಪ್ರತಿವಾದಿಗೆ ಆಗ ಸುಮಾರು 8 ವರ್ಷ ಇದ್ದಿರಬಹುದು. 1961 ರಲ್ಲಿ ನನ್ನ ಅಜ್ಜ ಆಸ್ತಿಯು ಗಂಡು ಮಕ್ಕಳ ಹೆಸರಿನಲ್ಲೇ ಇರಲಿ ಎಂಬ ಉದ್ದೇಶದಿಂದ ನನ್ನ ಮತ್ತು 1 ನೇ ವಾದಿಯ ಹೆಸರಿನಲ್ಲಿ ಇಟ್ಟಿದ್ದರು ಎಂದರೆ ಸರಿ. ನನ್ನ ತಾಯಿಯ ತವರುಮನೆಯ ಆಸ್ತಿಯ ಆದಾಯದಿಂದ ಆಸ್ತಿ ಖರೀದಿ ಮಾಡಿ ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ತವರು ಮನೆಯ ಆಸ್ತಿಯಿಂದ ಬರುವ ಆದಾಯ ಬಿಟ್ಟು ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದ ನಂತರ ಮತ್ತು ನಾವು ಶಾಲೆಗೆ ಹೋಗುತ್ತಿರುವ ಸಮಯದಲ್ಲಿ ತವರು ಮನೆಯ ಆಸ್ತಿಯನ್ನು ನನ್ನ ತಾಯಿಯೇ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ. ದಾವಾ 1(ಎ) ಯಿಂದ 1(ಎಫ್) ಆಸ್ತಿಗಳು ಮುಂಚೆ ಅಖಂಡವಾದ ಒಂದೇ ಆಸ್ತಿಯಾಗಿತ್ತು ಎಂದರೆ ಸರಿ. ದಾವಾ 1(ಜಿ) ಮತ್ತು 1(ಹೆಚ್) ಆಸ್ತಿಗಳು ಮುಂಚೆ ಒಂದೇ ಆಸ್ತಿಯಾಗಿತ್ತು ಎಂದರೆ ಸರಿ. ಈ ಆಸ್ತಿಗಳನ್ನು 2002 ರಲ್ಲಿ ನಾನು, 1 ನೇ ಪ್ರತಿವಾದಿ ಮತ್ತು ಚನ್ನಬಸಮ್ಮ ಪಾಲುವಿಭಾಗ ಮಾಡಿಕೊಂಡಿದ್ದೆವು ಎಂದರೆ ನಮ್ಮ ತಾಯಿ ಹೇಳಿದ್ದರಿಂದ ಪಾಲುವಿಭಾಗ ಮಾಡಿಕೊಂಡಿದ್ದೆವು. 210(ಎ) ಮತ್ತು 210(ಬಿ) ಆಸ್ತಿಗಳ ಮುಂಚೆ ಒಟ್ಟು 15 ಎಕರೆ ಆಸ್ತಿಯಾಗಿತ್ತು ಎಂದರೆ ಸರಿ. ವಿಭಾಗ ಮಾಡಿಕೊಳ್ಳುವಾಗ ಸರ್ವೇ ನಂ. 209 ರ ಒಟ್ಟು ವಿಸ್ತೀರ್ಣ 6 ಎಕರೆ 64 ಸೆಂಟ್ಸ್ ಇತ್ತು ಎಂದರೆ ಸರಿ. 2002 ರಲ್ಲಿ ನಾವು ಹಕ್ಕು ಬದಲಾವಣೆ ಕೋರಿ ಅರ್ಜಿ ಕೊಟ್ಟಿದ್ದೆವು ಎಂದರೆ ಸರಿ. 2002 ರಲ್ಲಿ ನಾನು, 1 ನೇ ಪ್ರತಿವಾದಿ ಮತ್ತು ನನ್ನ ಅಕ್ಕ ಚನ್ನಬಸಮ್ಮ ಹಕ್ಕು ಬದಲಾವಣೆಗೆ ಅರ್ಜಿ ಕೊಡುವಾಗ ನನ್ನ ತಂದೆ-ತಾಯಿಗೆ ನಾವು 3 ಜನ ಮಾತ್ರ ಮಕ್ಕಳು ಆದ್ದರಿಂದ ಪಾಲುವಿಭಾಗದ ಪ್ರಕಾರ ಖಾತೆ ಮಾಡಿ ಎಂದು ಅರ್ಜಿಯಲ್ಲಿ ಹೇಳಿದ್ದೇವೆ ಎಂದರೆ ನನಗೆ ಆ ಬಗ್ಗೆ ಧ್ಯಾಸವಿಲ್ಲ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ